**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 55–2010**

| | | |
|---|---|---|
| ಹೆಸರು | ನಾರಾಯಣಮ್ಮ | ಪ್ರಾ.ಸಾ.9 |
| ತಂದೆ ಹೆಸರು | ರಾಮಾಂಜಿನಪ್ಪ | ಚಾ.ಸಾ.5 |
| ವಯಸ್ಸು | 51 ವರ್ಷ | |
| ಕೆಲಸ | ಗೃಹಿಣಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಗುಂಡ್ರಹಳ್ಳಿ | ದಿ:–10–1–2019 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ:–**

ನಾನು ನಂದಗುಡಿಯಿಂದ ಗುಂಡ್ರಹಳ್ಳಿಗೆ ಆಟೋದಲ್ಲಿ 9 ವರ್ಷಗಳ ಹಿಂದೆ ಹೋಗುತ್ತಿದ್ದೆ. ಆಗ ಆಟೋವನ್ನು ಜೋರಾಗಿ ಓಡಿಸುತ್ತಿದ್ದು, ವಡ್ಡಹಳ್ಳಿ ಗೇಟ್ ಬಳಿ ಅದು ಪಲ್ಟಿಯಾಗಿರುತ್ತದೆ. ನನಗೆ ಮುಖದ ಎಡಭಾಗದಲ್ಲಿ ಕಣ್ಣಿಗೆ ಮತ್ತು ಕೈ ಕಾಲಿಗೆ ಗಾಯವಾಗಿತ್ತು. ನಮ್ಮ ಯಜಮಾನರಿಗೂ ಕೈ ಕಾಲಿಗೆ ಏಟಾಗಿತ್ತು. ಆಟೋದಲ್ಲಿದ್ದ ಉಳಿದವರಿಗೂ ಸ್ವಲ್ಪ ಸ್ವಲ್ಪ ಗಾಯವಾಗಿತ್ತು. ಅದರಲ್ಲಿದ್ದ ಒಬ್ಬ ವ್ಯಕ್ತಿ ತೀರಿ ಹೋಗಿರುತ್ತಾರೆ. ನಮ್ಮನ್ನು ನಂತರ ಹೊಸಕೋಟೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತವು ಅಟೋ ಓಡಿಸುತ್ತಿದ್ದವರಿಂದ ಆಗಿರುತ್ತದೆ. ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ :**

ನಾನು ಮನೆಗೆಲಸ ಮಾಡುತ್ತೇನೆ. ಆಟೋದಲ್ಲಿ 15–16 ಜನ ಇದ್ದೆವು. ನಾವು ಹೋಗುತ್ತಿದ್ದ ರಸ್ತೆ ಚಿಕ್ಕದಾಗಿತ್ತು. ನಾನು ಹೇಳಿದಂತೆ ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗದೆ ಇದ್ದರೂ, ನಮಗೆ ಪರಿಹಾರ ಸಿಗಲೆಂದು ಆರೋಪಿಯ ಮೇಲೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನ ಆಗಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಆರೋಪಿಯ ಮೇಲೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ರಸ್ತೆ ಯಾವ ಕಡೆಯಿಂದ ಯಾವ ಕಡೆಗೆ ಇತ್ತು ಎಂದು ಹೇಳಲು ಗೊತ್ತಿಲ್ಲ. ಆರೋಪಿ ಆ ದಿನ ಯಾವ ಬಟ್ಟೆ ಧರಿಸಿದ್ದ ಎಂದು ನಾನು ನೋಡಿಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**